ಬಯಸುವುದು ಇನ್ನು ಮುಂದೆ ಸಾಧ್ಯವಾಗದು. ಫಲವನ್ನು ಜೊತೆಗೂಡಿಸುವ ಲಕ್ಷ ಲಕ್ಷ ಪ್ರಶ್ನೆಗಳ ದೇಹಕ್ಕೆ ಚುಚ್ಚುವ ಮುಳ್ಳುಗಳೂ ಇರುತ್ತವೆ.

ಕವಳೆಕಾರನ ಕಡೆಯಿಂದ ಅವಳಿಗೆ ಯಾವ ಅಪೇಕ್ಷೆಯೂ ಇಲ್ಲ. ಅವನ ಸ್ವಂತದ ಬೇರೆ ಸುಖೀ ಸಂಸಾರ ಇದೆ. ಆ ಸಂಸಾರಿಯ ಇನ್ನೊಂದು ಹಾದಿಯ ಅಪಘಾತವಿದು. ಆದರೂ ಕುಂದಾ ಕವಳೆಕಾರನಿಗೆ ಎಲ್ಲ ಹೇಳಿದಳು. ಅವನು ಜವಾಬ್ದಾರಿ ಬಿಟ್ಟು ಮುಖ ತಿರುಗಿಸಿ ಹೋಗುವ ವ್ಯಕ್ತಿ ಅಲ್ಲ. ಆದರೆ ಇದನ್ನು ತಾಳಿಕೊಳ್ಳುವುದು ಅವನಿಗೆ ಸಾಧ್ಯವಾಗದು. ಆ ವಿಚಾರದಲ್ಲಿ ಕುಂದಾಳಿಗೆ ದುಃಖವಿಲ್ಲ. ಅವಳಿಗೆ ಗೊತ್ತಿದೆ, 'ಕೊಡುಪಡೆ'ಯ ಕ್ಷಣ ಮುಗಿದ ಬಳಿಕ ತನ್ನ ಪಾಡಿಗೆ ಪಕ್ಕಕ್ಕೆ ಸರಿಯಬೇಕಾಗುತ್ತದೆ. ಹೆಚ್ಚು ಬೇಡುವ ಹಾಗಿಲ್ಲ. ಹೆಚ್ಚು ಬೇಡಲು ಅವಕಾಶವನ್ನೂ ಕೊಡುವ ಹಾಗಿಲ್ಲ.

ಈ ಕುರಿತು ಕುಂದಾ ಮತ್ತು ಕವಳೆಕಾರ ತುಂಬಾ ಯೋಚಿಸಿದರು. ಒಂದೊಂದಾಗಿ ಪ್ರಶ್ನೆಗಳನ್ನು ಬಿಡಿಸಿದರು.

ಮನುಷ್ಯನ ಬದುಕು ಭಿನ್ನವಾದುದು.

ಹಕ್ಕಿಯ ಹಾಗೆ ಮುಕ್ತ ಹಾಗೂ ಸ್ವಚ್ಛಂದವಲ್ಲ. ತನಗೆ ಇಷ್ಟ ಬಂದ ಹಾಗೆ ರಂಗುರಂಗಿನ

